ಅಸಲು ದಾವಾ ನಂ. 112/2023
ಪಿ ಡಬ್ಲ್ಯು-2

ದಿನಾಂಕಃ 26-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ- ಪ್ರತಿವಾದಿ ನಂ.1 ರಿಂದ 3 ಪರ ಶ್ರೀ.ಎಮ್ ಎಸ್ ಎಮ್ ವಕೀಲರಿಂದ.**

ಸಾಕ್ಷ್ಯ ಪ್ರಮಾಣ ಪತ್ರ ಬರೆಯಲು ಮಾಹಿತಿ ನಾನೇ ಸ್ವತಃ ನೀಡಿರುತ್ತೇನೆ. ಪ್ರತಿವಾದಿ ನಂ.2 ಮತ್ತು 3 ಇವರು 1 ನೇ ಪ್ರತಿವಾದಿಯ ಸೊಸೆ ಇರುತ್ತಾರೆ. ಭೀಮಣ್ಣ ಮತ್ತು ದುರ್ಗವ್ವ ಇವರಿಗೆ 3 ಜನ ಹೆಣ್ಣುಮಕ್ಕಳು ಇರುತ್ತಾರೆ. ಹಾಗೇ 3 ಜನ ಮಕ್ಕಳು ಇರುವುದಾಗಿ ಸುಳ್ಳು ಹೇಳುತ್ತಿದ್ದು, 1 ನೇ ಪ್ರತಿವಾದಿ ಮಾತ್ರ ಮಗಳು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಈಗ ಎಷ್ಟು ವಯಸ್ಸು ಎಂದು ಗೊತ್ತಿಲ್ಲ. ನಾನು ಈಗ 30 ವರ್ಷಗಳ ಹಿಂದೆ ಮದುವೆ ಮಾಡಿಕೊಂಡು ಹುಬ್ಬಳ್ಳಿಯಲ್ಲಿಯೇ ವಾಸವಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಮನೆ ಊರು ಸವಣೂರು ಇರುತ್ತದೆ. ನನ್ನ ತವರು ಮನೆ ಯಲವಿಗಿ ಗ್ರಾಮ ಇರುತ್ತದೆ. ನನ್ನ ಮಗಳನ್ನು ಹುಬ್ಬಳ್ಳಿಯ ಯುವಕನೊಂದಿಗೆ ಮದುವೆ ಮಾಡಿಕೊಟ್ಟಿದ್ದು ಅಲ್ಲಿ ಆಗಾಗ ವಾಸ ಇರುತ್ತೇನೆ. ಈಗ ಖಾಯಂ ತರೀಖ ಹುಬ್ಬಳ್ಳಿಯಲ್ಲಿಯೇ ವಾಸವಿರುತ್ತೇನೆ ಎಂದರೆ ಸರಿ. ನನ್ನ ಆಧಾರ ಕಾರ್ಡ, ಕುಟುಂಬ ಪಡಿತರ ಚೀಟಿ ಹುಬ್ಬಳ್ಳಿ ರಹವಾಸಿಯವು ಇರುತ್ತವೆ ಎಂದರೆ ಸರಿಯಲ್ಲ.

2. 1 ನೇ ಪ್ರತಿವಾದಿಗೆ ಇಬ್ಬರು ಗಂಡು ಮಕ್ಕಳು, ಒಂದು ಹೆಣ್ಣು ಮಗಳು ಇರುತ್ತಾರೆ. ಕಮಲವ್ವಳ ಗಂಡು ಮಕ್ಕಳ ಹೆಸರು ದ್ಯಾಮಣ್ಣ ಮತ್ತು ಬಸಪ್ಪ ಇರುತ್ತದೆ. ಆದರೆ ಹೆಣ್ಣು ಮಗಳ ಹೆಸರು ಗೊತ್ತಿಲ್ಲ. ನಾನು ವಾದಿಯ ಪರವಾಗಿ ಬೇಕು ಅಂತಲೇ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿಯ ನಂಬರ ಗೊತ್ತಿಲ್ಲ. ಸವಣೂರಿನಲ್ಲಿ ವಡ್ಡರ ಓಣಿಯು ಕೊಳಚೆ ನಿರ್ಮೂಲನಾ ಮಂಡಳಿಯಿಂದ ಜನರಿಗೆ ನೀಡಿದ ವಸತಿ ಸಮುಚ್ಛಯ ಎಂದರೆ ಸರಿ. ಪ್ರತಿವಾದಿ ನಂ.1 ರಿಂದ 3 ಇವರಿಗೆ ಹಾಗೇ

ಅಸಲು ದಾವಾ ನಂ. 112/2023
ಪಿ ಡಬ್ಲ್ಯು-2

ಮಂಡಳಿಯವರು ಹಕ್ಕು ಪತ್ರ ನೀಡಿ ಮನೆ ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ಆದ್ದರಿಂದ ಅವು ಸರ್ಕಾರದ ಆಸ್ತಿಗಳು ಎಂದರೆ ಸರಿ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).